ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 95 ಎಂ ಅಂಡ್ ಇ 2010 ದಿನಾಂಕ: 25/09/2010 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 668 ವೆಚ್ಚ-9/10 ಆರ್ಎಫ್ ನಂ. 45076, ದಿನಾಂಕ: 29/09/2010ರಲ್ಲಿ ನೀಡಿರುವ ಸಹಮತಿ ಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ).

ಏತ ನೀರಾವರಿ ಯೋಜನೆ

12 (22) ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಹಿನ್ನೀರಿನ ಪ್ರದೇಶದಿಂದ ಹೊಸದುರ್ಗ ತಾಲ್ಲೂಕಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಹೊನ್ನವಳ್ಳಿ ಏತ ನೀರಾವರಿ ಯೋಜನೆಯ ಒಟ್ಟು ಅಂದಾಜು ಎಷ್ಟು? ಎಷ್ಟು ಖರ್ಚಾಗಿದೆ? ಕಾಮಗಾರಿ ಯಾವ ಹಂತದಲ್ಲಿದೆ, ಯಾವಾಗ ಮುಗಿಯುತ್ತದೆ (ಪೂರ್ಣ ವಿವರ ಒದಗಿಸುವುದು);

ಆ) ಅಪ್ಪರ್ ಭದ್ರಾ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ? ಈ ಯೋಜನೆ ಯಾವಾಗ ಪೂರ್ಣವಾಗುತ್ತದೆ? ಹೊಸದುರ್ಗ ತಾಲ್ಲೂಕಿನ ಎಷ್ಟು ಎಕರೆ ಪ್ರದೇಶಕ್ಕೆ ಇದರಿಂದ ಪ್ರಯೋಜನವಾಗುತ್ತದೆ? ಎಷ್ಟು ಕೆರೆಗಳು ಭರ್ತಿಯಾಗುತ್ತದೆ? ಮುಂದೆ ಎಷ್ಟು ವರ್ಷಗಳ ಅವಧಿಯಲ್ಲಿ ಹೊಸದುರ್ಗ ತಾಲ್ಲೂಕಿಗೆ ನೀರು ಬರಬಹುದು?

ಇ) ಕರ್ನಾಟಕ ನೀರಾವರಿ ನಿಗಮದಿಂದ ಕಳೆದ 3 ವರ್ಷಗಳಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳೆಷ್ಟು? ಒದಗಿಸಿದ ಅನುದಾನವೆಷ್ಟು? ಕಾಮಗಾರಿ ಯಾವ ಹಂತದಲ್ಲಿವೆ? ಯಾವಾಗ ಮುಗಿಯುತ್ತದೆ (ವಿವರ ಒದಗಿಸುವುದು)

ಈ ಹೊಸದುರ್ಗ ತಾಲ್ಲೂಕಿನ ವೇದಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳನ್ನು ಹಾಗೂ ತಾಲ್ಲೂಕಿನಲ್ಲಿ ಹರಿಯುವ ಹಳ್ಳಿಗಳಲ್ಲಿ ಬ್ಯಾರೇಜ್‌ಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರದ ಮುಂದಿದೆಯೇ? ಯಾವಾಗ ಪ್ರಾರಂಭವಾಗುತ್ತದೆ (ವಿವರ ಒದಗಿಸುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಕಿ.ಮೀ 9.9 ರಿಂದ ನೀರನ್ನು ಎತ್ತಿ ತಿಪಟೂರು ತಾಲ್ಲೂಕಿನ 18 ಕೆರೆಗಳಿಗೆ, ಅರಸೀಕೆರೆ ತಾಲ್ಲೂಕಿನ 3 ಕೆರೆಗಳಿಗೆ, ಕಡೂರು ತಾಲ್ಲೂಕಿನ 1 ಕೆರೆಗೆ ಹಾಗೂ ಹೊಸದುರ್ಗ ತಾಲ್ಲೂಕಿನ 1 ಕೆರೆಗೆ ಒಟ್ಟು 23 ಕೆರೆಗಳಿಗೆ ಕುಡಿಯುವ ನೀರಿನ ಸಲುವಾಗಿ ನೀರೊದಗಿಸುವ ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆಯ ಅಂದಾಜು ಮೊತ್ತ ರೂ.87.20 ಕೋಟಿಗಳು.

ಫೆಬ್ರವರಿ 2012ರ ಅಂತ್ಯಕ್ಕೆ ರೂ.53.56 ಕೋಟಿಗಳು ವೆಚ್ಚವಾಗಿರುತ್ತವೆ.

ಈ ಯೋಜನೆಯ ಪಂಪ್ ಹೌಸ್, ಪಂಪ್ ಮತ್ತು ಮೋಟರುಗಳು ಅಳವಡಿಕೆ ಹಾಗೂ ರೈಸಿಂಗ್ ಮೈನ್ (ರೈಲ್ವೇ ಕ್ರಾಸಿಂಗ್ ಭಾಗವನ್ನು ಹೊರತು ಪಡಿಸಿ) ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ತಿಪಟೂರು ತಾಲ್ಲೂಕಿನ 18 ಕೆರೆಗಳ ವಿತರಣಾ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, 6 ಕೆರೆಗಳಿಗೆ ನೀರೊದಗಿಸಲಾಗಿರುತ್ತದೆ. ಅರಸೀಕೆರೆ, ಕಡೂರು ಮತ್ತು ಹೊಸದುರ್ಗ ತಾಲ್ಲೂಕಿನ ಕೆರೆಗಳ ಪೈಪ್‌ಲೈನ್ ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಜೂನ್ 2012ಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ)

1) ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಭದ್ರಾ ಜಲಾಶಯಕ್ಕೆ 15 ಟಿ.ಎಂ.ಸಿ. ನೀರೆತ್ತುವ ಮೊದಲನೇ ಹಂತದ ಕಾಮಗಾರಿಯನ್ನು ಪ್ಯಾಕೇಜ್–1ರಡಿಯಲ್ಲಿ ಕೈಗೆತ್ತಿ ಕೊಳ್ಳಲಾಗಿದೆ. ಪ್ಯಾಕೇಜ್–1 ರಡಿಯಲ್ಲಿ ಕಾಲುವೆ – ಅಗೆತ, ಪಂಪ್ ಹೌಸ್–1ರ ಅಗೆತದ ಕಾಮಗಾರಿ ಪೂರ್ಣ ಗೊಂಡಿದ್ದು, ಕಾಂಕ್ರೀಟ್ ಕಾಮಗಾರಿ ಮತ್ತು ರೈಸಿಂಗ್ ಮೇನ್ ಅಳವಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.

2) ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ 21.50 ಟಿ.ಎಂ.ಸಿ. ನೀರೆತ್ತುವ ಎರಡನೇ ಹಂತದ ಕಾಮಗಾರಿಯನ್ನು ಪ್ಯಾಕೇಜ್–2 ರಡಿಯಲ್ಲಿ ಕೈಗೆತ್ತಿ ಕೊಳ್ಳಲಾಗಿದೆ. ಪ್ಯಾಕೇಜ್–2ರಡಿಯಲ್ಲಿ ಪಂಪ್ ಹೌಸ್–1 ರ ಅಗೆತದ ಕಾಮಗಾರಿ ಪೂರ್ಣಗೊಂಡಿದ್ದು, ಕಾಂಕ್ರೀಟ್ ಕಾಮಗಾರಿ ಪ್ರಗತಿಯಲ್ಲಿದೆ. 7.35 ಕಿ.ಮೀ. ಕಾಲುವೆಯ ಅಗೆತ ಪೂರ್ಣಗೊಂಡಿದ್ದು, ಕಾಂಕ್ರೀಟ್ ಲೈನಿಂಗ್ ಪ್ರಗತಿ ಯಲ್ಲಿದೆ. ಅಡ್ಡಮೋರಿ ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಜಂಬದಹಳ್ಳ ಅಕ್ವಡಕ್ಟ್ ಕಾಮಗಾರಿಯ "ಪೈಲ್ ಫೌಂಡೇಷನ್" ಕಾಮಗಾರಿಯೂ ಪ್ರಗತಿಯಲ್ಲಿದೆ. ಮತ್ತು ಸದರಿ ಪ್ಯಾಕೇಜ್–2ರ ಕಾಮಗಾರಿಗಳಿಗೆ ಅವಶ್ಯವಿರುವ ನೀರೆತ್ತುವ ಪಂಪಿಂಗ್ ಯಂತ್ರೋಪಕರಣಗಳನ್ನು ಕಾಮಗಾರಿ ಸ್ಥಳಕ್ಕೆ ಸರಬರಾಜು ಮಾಡಲಾಗಿದೆ.

3) ಮೂರನೇ ಪ್ಯಾಕೇಜ್ ಅಡಿಯಲ್ಲಿ ಅಜ್ಜಂಪುರ ಬಳಿ 6.90 ಕಿ.ಮೀ. ಉದ್ದದ ಸುರಂಗ ನಿರ್ಮಿಸುವ ಕಾಮಗಾರಿಗೆ ಸ್ಥಳೀಯ ರೈತರಿಂದ ಇದ್ದ ಅಡಚಣೆ ಈಗ ನಿವಾರಣೆ ಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಭದ್ರಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಹೊಸದುರ್ಗ ತಾಲ್ಲೂಕಿನ 31,035 ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ ಮತ್ತು ಹೊಸದುರ್ಗ ತಾಲ್ಲೂಕಿನ 3 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಲು ಸಹ ಈ ಯೋಜನೆಯಲ್ಲಿ ಉದ್ದೇಶಿಸಲಾಗಿದೆ.

ಚಿತ್ರದುರ್ಗ ಶಾಖಾ ಕಾಲುವೆಯ ಪ್ರಾಥಮಿಕ ಸರ್ವೆ ಕಾರ್ಯವು ಬಹುತೇಕ ಪೂರ್ಣಗೊಂಡಿದೆ.

ಈ ಯೋಜನೆಯನ್ನು 2015–16ನೇ ಸಾಲಿನಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಇ) ಹೊಸದುರ್ಗ ತಾಲ್ಲೂಕಿನ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಚಿತ್ರದುರ್ಗ ಶಾಖಾ ಕಾಲುವೆಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ 34 ಕಾಮಗಾರಿಗಳನ್ನು ರೂ.870.00 ಲಕ್ಷಗಳ ಅನುದಾನದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಎಸ್.ಸಿ.ಪಿ. ಕಾಮಗಾರಿಗಳಡಿಯಲ್ಲಿ 82 ಕಾಮಗಾರಿಗಳನ್ನು ರೂ.876.00 ಲಕ್ಷಗಳ ಅನುದಾನದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಟಿ.ಎಸ್.ಪಿ. ಕಾಮಗಾರಿಗಳಡಿಯಲ್ಲಿ 19 ಕಾಮಗಾರಿಗಳನ್ನು ರೂ.414.00 ಲಕ್ಷಗಳ ಅನುದಾನದೊಂದಿಗೆ ಕೈಗೆತ್ತಿ ಕೊಳ್ಳಲಾಗಿದೆ. ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಈ) ಹೊಸದುರ್ಗ ತಾಲ್ಲೂಕಿನಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ಬಾಗಶೆಟ್ಟಿಹಳ್ಳಿ ಹತ್ತಿರ, ಬಲ್ಲಾಳ ಸಮುದ್ರದ ಹತ್ತಿರ ಹಾಗೂ ಖಾನಿ ಹಳ್ಳಕ್ಕೆ ಒಟ್ಟು 3 ಬ್ರಿಡ್ಜ್ ಕ್ರಮ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲು ರೂ.740.00 ಲಕ್ಷಗಳ ರೇಖಾ ಅಂದಾಜು ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ.

ಹೊಸದುರ್ಗ ತಾಲ್ಲೂಕಿನ ಅತ್ತಿಮೊಗ್ಗೆ ಹತ್ತಿರ ಹರಿಯುವ ಹಳ್ಳಕ್ಕೆ, ಕಾರೇಹಳ್ಳಿ ಹರಿಹರೇಶ್ವರ ದೇವಸ್ಥಾನದ ಹತ್ತಿರ ಹರಿಯುವ ಹಳ್ಳಕ್ಕೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ರೂ.110.00 ಲಕ್ಷಗಳ ರೇಖಾ ಅಂದಾಜು ತಯಾರಿಸಿದ್ದು, ಅಧೀನ ಕಛೇರಿಗಳಲ್ಲಿ ಪರಿಶೀಲನಾ ಹಂತದಲ್ಲಿದೆ. ತಾಂತ್ರಿಕ ಪರಿಶೀಲನೆಯ ನಂತರ ಕಾಮಗಾರಿಗಳ ಅವಶ್ಯಕತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ- II

SECRETARY'S REPORT

Statement Showing the List of Bills Assented to by the President/Governor pertaining to Thirteenth Assembly

Sl. No.	Name of the Bill	Date of Assent	Assented by
1	**The Karnataka Town and Country Planning (Amendment) Bill, 2011**	02.01.2012	Governor
2	The Karnataka Regulation of Stone Crushers Bill, 2011	03.01.2012	Governor
3	The Kittur Development Authority Bill, 2011	19.01.2012	Governor
4	The Karnataka Hindu Religious Institutions and Charitable Endowments (Second Amendment) Bill, 2011	02.03.2012	Governor